# ನೀವು ಕೇಳಿದಿರಿ?

ಪಿ. ಜಯವಂತ ಪೈ, ಕುಂದಾಪುರ
ಪ್ರೇಯಸಿಗೂ, ಹೆಂಡತಿಗೂ ವ್ಯತ್ಯಾಸವೇನು?



ಪ್ರೇಯಸಿ ಬದಲಾಗಬಲ್ಲ ಕ್ಯಾಲೆಂಡರ್; ಹೆಂಡತಿ ನಿರಂತರತೆಯ ಗಡಿಯಾರ.

ಮಹಾವೀರ ಕಾಸರ, ಶಿವಮೊಗ್ಗ
ಭೂಮಿ 24/7 ಸುತ್ತುತ್ತದೆ. ಆದರೂ ದೇಶಗಳನ್ನು ಸುತ್ತಬೇಕು ಎನ್ನುವುದೇಕೆ?
ಭೂಮಿ ಹಲಸು; ದೇಶ ತೊಳೆ; ಸವಿಯರಿಯಲು ತೊಳೆಯ ಸಾಮೀಪ್ಯ ಸಿಗಲೇಬೇಕು.

ಮಲ್ಲಿಕಾರ್ಜುನ, ಸುರಧೇನುಪುರ
ನಾಮಪತ್ರ ಸಲ್ಲಿಕೆಗೆ ಆನ್‌ಲೈನ್ ವ್ಯವಸ್ಥೆ ಯಾಕಿಲ್ಲ?
ಅಬ್ಬರ ಇರುವುದಿಲ್ಲವಲ್ಲ! ಮಾಧ್ಯಮ, ರಾಜಕಾರಣಗಳಿಗೆ ಅವಶ್ಯವಾದ್ದು ಅರ್ಹತೆಯಲ್ಲ, ಆರ್ಭಟ.

ಆದಿನಾರಾಯಣಮುನಿ, ಕೊಳ್ಳೇಗಾಲ
ಕಟ್ಟಿರುವ ಬ್ರಹ್ಮಗಂಟನ್ನು ಬಿಚ್ಚುವವರು ಯಾರು?



ಹಲವರು – ವಿಚ್ಛೇದನ ವಕೀಲರು; ದುರ್ವೈದ್ಯ...

ಗಂಜಾಂ ನಾಗರಾಜ್, ಮೈಸೂರು
ಹೆಂಡತಿಗೆ ಕೋಪ ಬಾರದಂತಿರಲು ನಾವೇನು ಮಾಡಬೇಕು?
'ಅನ್ಯಥಾ ಶರಣಂ ನಾಸ್ತಿ' ಎಂದು ಅರಿತು ಆಚರಿಸಬೇಕು.

ರಮೇಶ ಜ. ಬೊಂಗಾಳೆ, ಬೈಲಹೊಂಗಲ
ಕಿವಿಗೂ, ಕವಿಗೂ ಏನು ವ್ಯತ್ಯಾಸ?
ಕಿವಿಗೆ ಹತ್ತಿ ತುರುಕಿ ಸದ್ದು ನಿಲ್ಲಿಸಬಹುದು.

ರಾಜೀವ್ ಎನ್. ಮಾಗಲ್, ಸಕಲೇಶಪುರ
ಬಿಳಿ ಕೂದಲಿನವರಿಗೆಲ್ಲ ಫ್ರೀ ಬಸ್ ಪ್ರಯಾಣ ಘೋಷಿಸಿದರೆ ನಷ್ಟ ಯಾರಿಗೆ, ಲಾಭ ಯಾರಿಗೆ?
ಲಾಭ ವೈಟ್ ಡೈ ಮಾಡಿಕೊಂಡವರಿಗೆ; ನಷ್ಟ ಬೋಡರಿಗೆ.

ಜಯತೀರ್ಥ ಶ್ರೀಪತಿ, ಹುಬ್ಬಳ್ಳಿ
ನನ್ನ ಬಳಿ ಎಲ್ಲವೂ ಇದೆ. ಆದರೂ ಹೆಣ್ಣು ಕೊಡುವವರು ಇಲ್ಲ. ಏನು ಮಾಡಲಿ?
ಕೊಂಚ ಕಾಯಿರಿ. ಮುಂದಿನ ಎಲೆಕ್ಷನ್ನಲ್ಲಿ ಹತಾಶರಿಗೆ ಲಗ್ನಭಾಗ್ಯ ಘೋಷಣೆಯಾಗುವುದಂತೆ.

ವಿ. ಹೇಮಂತಕುಮಾರ್, ಬೆಂಗಳೂರು
ಈ ಭಾಗ್ಯ ಐದು ವರ್ಷಾನೂ ಸಿಗ್ತಾಳಾ?
ಅವಳು ಮನೆಯ ಮಕ್ಕಳಿದ್ದಂತೆ. ನಮ್ಮೊಡನೆ ಇರುವಷ್ಟು ದಿನವಷ್ಟೇ ಲೆಕ್ಕ.

ಪತ್ತಂಗಿ ಎಸ್. ಮುರಳಿ, ಬೆಂಗಳೂರು
ಪುಸ್ತಕಗಳನ್ನು ರದ್ದಿಗೆ ಹಾಕುವವರಿಗೆ ತಮ್ಮ ಕಿವಿಮಾತು?
ಅವನ್ನು ಕತ್ತೆಗಳಿಗಾದರೂ ಕೊಡಿ. ಸುಲಭವಾಗಿ ಜೀರ್ಣಿಸಿಕೊಂಡಾವು.

ಬಿದರಹಳ್ಳಿ ಚನ್ನವೀರಪ್ಪ, ಹಿರೇಹಡಗಲಿ
ಮರಣಕ್ಕೂ, ಮೋಕ್ಷಕ್ಕೂ ಏನು ಸಂಬಂಧ?
ಪರಮಾತ್ಮನಲ್ಲಿ ಲೀನವಾಗಲು ಮರಣ ಪಾಸ್‌ಪೋರ್ಟ್, ಮೋಕ್ಷ ವೀಸಾ.

ಸವಿತಾ ರವಿ ಸುಟ್ಟಟ್ಟಿ, ಬನಹಟ್ಟಿ
ಸ್ನೇಹ ಮತ್ತು ಪ್ರೀತಿಯ ಅಂತರವೇನು ಸರ್?
ಸ್ನೇಹದಲ್ಲಿ ಸಲಿಗೆ ಹೆಚ್ಚು; ಪ್ರೀತಿಯಲ್ಲಿ ಹೊಣೆ ಹೆಚ್ಚು.

ಜೀವಿ, ಗೊಂಡೇದಹಳ್ಳಿ
ಮಹಿಳೆಯರು ಮದುವೆಯನ್ನು ಮುಂಬಡ್ತಿಯೆಂದು ಕಾಣುವಾಗ ಪುರುಷರೇಕೆ ಹಿಂಬಡ್ತಿಯೆಂದು ಭಾವಿಸುವರು?
ಅದು ಭಾವನೆಯಲ್ಲ, ವಾಸ್ತವ. ಶಾಪಿಂಗ್ ನಂತರ ಸತಿ ಮುಂದೆ, ಪತಿ ಹಿಂದೆ ಹಿಂದೆ.

ಅಮರಯ್ಯಾ ಪತ್ರಿಮಠ, ಸುರಪುರ
ಬಾಳಿನಲ್ಲಿ ತಿರುವುಗಳು ಬರುವುದು ಯಾವಾಗ?
ಚಾರ್ಮಾಡಿ, ಶಿರಾಡಿ ಘಾಟಿಗಳಲ್ಲಿ ಸಂಚರಿಸುವಾಗ.

## ವಾರದ ಪ್ರಶ್ನೆ

ಮಲ್ಲಿಕಾರ್ಜುನ ಹ. ಬಗಲಿ, ಸಾಂಗ್ಲಿ
ಪ್ರೇಮಿಗಳು ಹೆಚ್ಚು ಸುಳ್ಳು ಹೇಳುತ್ತಾರಂತೆ. ಏಕೆ?
ಆಯಾ ದೇಶದ ನಾಣ್ಯ ಅಲ್ಲಲ್ಲಿ ಚಲಾವಣೆಯಲ್ಲಿರುತ್ತದೆ. ಪ್ರೇಮರಾಜ್ಯದ ನಾಣ್ಯ ಸುಳ್ಳು.

ದಿನೇಶ್, ಗುಡ್ಡದೂರು
ಮಠಾಧೀಶರಿಗೇಕೆ ಕಾವಿ ಬಣ್ಣ?
ಕಾವಿರಬಾರದು ಎಂದು ಸೂಚಿಸಲು.

ಕೆ.ವಿ. ಗೋವಿಂದಾಚಾರಿ, ಮೈಸೂರು
ಆರೋಗ್ಯ, ಅಕ್ಷರಗಳಿಗೆ ಆಹಾರವೇ ಮುಖ್ಯ. ಆದರೆ ಇದನ್ನು ನೀಡುವ ರೈತ ಅನಕ್ಷರಸ್ಥನಾಗಿರುತ್ತಾನಲ್ಲ?
ಜೀವನವೇ ಹಾಗೆ. ಉಣ್ಣೆ ನೀಡುವ ಕುರಿಗೆ ಚಳಿಯಾದಾಗ ಸ್ವೆಟರ್ ಇರುವುದಿಲ್ಲ.

ಆರ್. ಮಧುಸೂದನ್, ಹಾಸನ
ಚಾಣಕ್ಯ ತನ್ನ ಹೆಂಡತಿಯ ತಂತ್ರಗಳಿಗೂ ಸಿಲುಕಲಿಲ್ಲವಾ?



ಸಿಲುಕಿದ್ದರೆ ಅವನನ್ನು ಚಾಣಕ್ಯ ಎಂದು ಕರೆಯುತ್ತಿರಲಿಲ್ಲ.

ಬಿ.ಆರ್. ಉಷಾ, ಬೆಂಗಳೂರು
ಸತ್ತಮೇಲೆ ಎಷ್ಟು ವರ್ಷ ತಿಥಿ ಮಾಡಬೇಕು?
ಇದ್ದಾಗಲೇ ಸರಿಯಾಗಿ ಮಾಡಿದ್ದರೆ ಸತ್ತಮೇಲೆ ಮಾಡಬೇಕಾಗೇ ಇಲ್ಲ.

ಪಿ.ಜೆ. ರಾಘವೇಂದ್ರ, ಮೈಸೂರು
ದ್ವಾಪರದಲ್ಲಿ ತಾವು ಧರ್ಮರಾಯ (ಯಕ್ಷಪ್ರಶ್ನೆ) ಆಗಿದ್ರಂತೆ?
ಯಕ್ಷನಾಗಿದ್ದೆ. ನೀವು ಧರ್ಮಜರಾಗಿದ್ದಿರಿ. ಆದ್ದರಿಂದಲೇ ಈಗ ಈ ಸೇಡಿನ ಪ್ರಶ್ನಾವಳಿ!

■ ರಾಮ್